<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.355/2019. P.W.-1.**

ದಿನಾಂಕಃ**19.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

<u>ಮುಂದುವರೆದ ಪಾಟೀ ಸವಾಲುಃ</u> ಪ್ರತಿವಾದಿಯರ ಪರ ಶ್ರೀ ಬಿ ಎಂ ಎಸ್ ಕೆ ವಕೀಲರಿಂದಃ-

ನಾನು ಕ್ರಯದ ಕರಾರು ಪತ್ರ ಮಾಡಿಸುವ ಮೊದಲು ಸದರಿ ಜಮೀನಿಗೆ ಸಂಬಂಧಪಟ್ಟ ದಾಖಲೆಗಳನ್ನು ವಕೀಲರಿಗೆ ನೀಡಿ ಪರೀಲನೆ ಮಾಡಿಸಿ ಮಾಹಿತಿ ತಿಳಿದುಕೊಂಡಿರುತ್ತೇನೆ. ನಾನು ಮಾಹಿತಿ ಪಡೆದಿರುತ್ತೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ದಾವಾ ಸ್ವತ್ತಾದ ಸರ್ವೆ ನಂ.15/1 ರ ಮೂಲ ಮಾಲೀಕರು ಜಡೇಮಲ್ಲಪ್ಪ ರವರಾಗಿದ್ದು, ಸದರಿಯವರಲ್ಲಿ ನಾನು ವಿಚಾರ ಮಾಡಿರುವುದಿಲ್ಲ. ದಾವೆ ಸಲ್ಲಿಸಿದ ನಂತರದಲ್ಲಿಯೂ ಸಹಃ ನಾನು ಜಡೇಮಲ್ಲಪ್ಪ ರವರಲ್ಲಿ ವಿಚಾರಣೆ ಮಾಡಿರುವುದಿಲ್ಲ. ಜಡೇಮಲ್ಲಪ್ಪ ರವರಿಗೆ ಮಲ್ಲಯ್ಯ, ವಿನಯ್, ನಂದಿನಿ, ಮೇಘನಾ ಎಂಬ 4 ಜನ ಮಕ್ಕಳು ಎಂದರೆ ಸರಿ. ಸದರಿ 4 ಜನ ಮಕ್ಕಳ ಪೈಕಿ ಮಲ್ಲಯ್ಯ ಮತ್ತು ವಿನಯ್ ಪಕ್ಷಗಾರರನ್ನಾಗಿ ಮಾಡಿದ್ದು ಉಳಿದ ನಂದಿನಿ ಮತ್ತು ಮೇಘನಾ ಮತ್ತು ಜಡೇಮಲ್ಲಪ್ಪ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಅವರ ತಾಯಿ ಕೋಮಲ ರವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಜಡೇಮಲ್ಲಪ್ಪ, ನಂದಿನಿ, ಮೇಘನಾ ರವರು ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಕೊಳ್ಳುತ್ತೇವೆ ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಗೆ ನಾನು ವಕೀಲರ ಮೂಲಕ ತಕರಾರು ಸಲ್ಲಿಸಿದ್ದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಅರ್ಜಿಯ ಮೇಲೆ ಏನು ಆದೇಶವಾಗಿದೆ ಎಂದು ನನಗೆ ಗೊತ್ತಿಲ್ಲ.

ಕ್ರಯದ ಕರಾರು ಪತ್ರದಲ್ಲಿ ಇಂತಿಷ್ಟು ದಿನಗಳ ಒಳಗಾಗಿ ಕ್ರಯ ಮಾಡಿಕೊಡಬೇಕು ಎಂದು ನಮೂದು ಆಗಿಲ್ಲ ಎಂದರೆ ಸರಿ. ನಿಪಿ 1 ಕ್ರಯದ ಕರಾರು ಪತ್ರಲ್ಲಿ ಸಹಃ ಜಡೇಮಲ್ಲಪ್ಪ, ನಂದಿನಿ, ಮೇಘನಾ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ತುಂಬಾ ವರ್ಷದಿಂದ ಅಡಿಕೆ ವ್ಯಾಪಾರ ಮಾಡುತ್ತಿದ್ದೇನೆ ಹಾಗೂ ನನಗೆ ಬ್ಯಾಂಕ್ ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ರೂ.20,000/-ಕ್ಕಿಂತ ಹೆಚ್ಚಿನ ಹಣ ನೀಡಬೇಕಾದಲ್ಲಿ ಚೆಕ್ ಅಥವಾ ಡಿ.ಡಿ ಅಥವಾ ನೆಫ್ಟ್ ಮೂಲಕ ನೀಡಬೇಕು ಎಂದರೆ ನನಗೆ ಗೊತ್ತಿಲ್ಲ.

**O.S. No.355/2019. PW-1.**

ನನ್ನ ವಿರುದ್ಧ ಕಡೂರು ನ್ಯಾಯಾಲಯದಲ್ಲಿ ಶರತ್ ಕುಮಾರ್, ರಿಯಾಜ್ ಖಾನ್, ಅಶೋಕ್‌ಕುಮಾರ್ ಸಕ್ಲೇಶ, ಪರಮೇಶನಾಯ್ಕ, ಸುರೇಶ್.ಕೆ.ಜಿ.(2 ಕೇಸು), ಹೆಚ್ ಎನ್.ರಾಜು ರವರುಗಳು ಚೆಕ್ ಕೇಸುಗಳನ್ನು ದಾಖಲು ಮಾಡಿದ್ದಾರೆ ಎಂದರೆ ಅವುಗಳು ಎಲ್ಲಾ ಮುಕ್ತಾಯಗೊಂಡಿದ್ದು ರಾಜು ರವರ ಕೇಸು ಮಾತ್ರ ಚಾಲ್ತಿಯಲ್ಲಿ ಇದೆ ಎಂದು ನುಡಿಯುತ್ತಾರೆ. ಅದೇ ರೀತಿ ನಾನು ಹಲವರ ವಿರುದ್ಧ ಚೆಕ್ ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿ.

ನಾನು ಲೇವಾದೇವಿ ವ್ಯವಹಾರ ಮಾಡುವ ಬಗ್ಗೆ ಲೈಸನ್ಸ್ ಪಡೆದಿರುವುದಿಲ್ಲ, ನನ್ನ ಬಳಿ ವ್ಯವಹಾರದ ಲೈಸನ್ಸ್ ಇದೆ. ನಾನು ಸ್ಥಳೀಯ ಜನರಿಗೆ ಹಣಕೊಡುವ ತೆಗೆದುಕೊಳ್ಳುವ ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯವರು ನನ್ನಿಂದ ರೂ.50,000/- ಹಣವನ್ನು ಸಾಲವಾಡಿ ಪಡೆದಿದ್ದರಿಂದ ನಾನು ಭದ್ರತೆಗೆಂದು ನಿಪಿ1 ರಂತೆ ಪತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಕೀಲರ ನೋಟೀಸ್ ಅನ್ನು ಪ್ರತಿವಾದಿಯವರಿಗೆ ನೀಡಿದ 2 ವರ್ಷಗಳ ಅಂತರದಲ್ಲಿ ಈ ದಾವೆ ಹೂಡಿದ್ದು ಈ ದಾವೆ ಹೂಡುವ ಪೂರ್ವದಲ್ಲಿ ಬೇರೆ ಯಾವುದೇ ನೋಟೀಸ್ ಅನ್ನು ಪ್ರತಿವಾದಿಗಳಿಗೆ ನೀಡಿರುವುದಿಲ್ಲ. ನಿಪಿ 1 ರಂತೆ ವ್ಯವಹಾರವಾಗಿರುವುದಿಲ್ಲ ಹಾಗೂ ಆ ಸಂಬಂಧ ನಗಧು ರೂಪದಲ್ಲಿ ರೂ.3,85,000/- ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಆರ್ಥಿಕ ಸಂಕಷ್ಟದಲ್ಲಿ ಇದ್ದು ನಾನು ಅಷ್ಟು ಹಣ ನೀಡಲು ಆರ್ಥಿಕ ಸಬಲನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ಅಕ್ರಮ ಲಾಭ ಪಡೆಯುವ ಉದ್ದೇಶಂದ ಈ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.